ಸಮಯ ತೆಗೆದುಕೊಳ್ಳುವುದಿಲ್ಲ. ಅಧಿಕಾರಿಗಳಿಂದ ಕಲಾವಿದರಿಗೆ ಏನು ಪ್ರಯೋಜನವಾಗಬೇಕೋ ಅದು ಆಗುತ್ತಿಲ್ಲ ಎನ್ನುವುದು ನನ್ನ ನಿಸ್ಸಂಶಯವಾದ ಅಭಿಪ್ರಾಯ.

ಶ್ರೀ ವಾಟಾಳ್ ನಾಗರಾಜ್ : ಬುಡುಬುಡುಕೆ ಎಂಬುದು ಇತ್ತೀಚಿನ ದಿನಗಳಲ್ಲಿ ಅದು ಒಂದು ಜಾತಿಯ ಸಂಕೇತವಾಗಿಲ್ಲ. ನಮ್ಮ ರಾಜಕಾರಣಿಗಳಲ್ಲಿ ಬಹಳಷ್ಟು ಜನರು ಇತ್ತೀಚೆಗೆ ಬುಡುಬುಡುಕೆಯನ್ನು ಬಿಡುವುದನ್ನು ಕಲಿತಿದ್ದಾರೆ. ಆದ್ದರಿಂದ ಅವರೆಲ್ಲರಿಗೂ ಈ ಬುಡುಬುಡಿಕೆಯನ್ನು ಒದಗಿಸುತ್ತೀರೋ?

ಶ್ರೀ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ವಾಟಾಳ್ ನಾಗರಾಜ್‌ರವರು ಬುಡುಬುಡುಕೆಯವರು ಹೇಳುವ ಜಾತಕವನ್ನು ಕೇಳಿರಬಹುದೆಂದು ಕಾಣಿಸುತ್ತದೆ. ಈ ಸದನದಲ್ಲಿ ಬುಡುಬುಡುಕೆಯವರು ಯಾರೂ ಇಲ್ಲವೆಂದು ನನಗನಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಈಗ ಬುಡುಬುಡುಕೆಯನ್ನು ಬಿಡುವುದೇ ಒಂದು ರಾಜಕಾರಣ ಆಗಿದೆ. ಅವರಿಗೂ ನೀವು ನಿಜವಾಗಿ ಒದಗಿಸುತ್ತೀರೋ?

ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್ : ನಿಜವಾದ ಬುಡುಬುಡುಕೆಯವರು ಈ ರಾಜಕಾರಣಕ್ಕೆ ಬರುವುದೇ ಇಲ್ಲ. ಅವರ ಕಸುಬೇ ಬೇರೆ. ಅವರು ಬೇರೆ ಕಡೆಯಲ್ಲೇ ಇರುತ್ತಾರೆ.

ಶ್ರೀ ಎಸ್. ಕೃಷ್ಣಪ್ಪ : ಹಿಂದೆ ಕಲಾವಿದರಿಗೆ ಮಾಸಾಶನವನ್ನು ಕೊಡುವಂಥ ಒಂದು ಪರಿಪಾಠ ಇತ್ತು ಈಗ 1987 ರಿಂದ ಅದನ್ನು ನಿಲ್ಲಿಸಿದ್ದಾರೆ. ಅದನ್ನು ಏತಕ್ಕೆ ನಿಲ್ಲಿಸಿದರೆಂದು ಗೊತ್ತಿಲ್ಲ. ದಯವಿಟ್ಟು ಅದನ್ನು ಮತ್ತೆ ಮುಂದುವರೆಸಬೇಕು. ಇದರಿಂದ ಹಿಂದೆ ಬಹಳ ಜನ ಕಲಾವಿದರಿಗೆ ಅನುಕೂಲವಾಗಿದೆ. ಈಗಿನ ಕಲಾವಿದರಿಗೆ ಇದು ದೊರೆಯುತ್ತಿಲ್ಲ. ಅದನ್ನು ಮತ್ತೆ ಮುಂದುವರೆಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ನಾವು ಮಾಸಾಶನವನ್ನು ಕಲಾವಿದರಿಗೆ ನಿಲ್ಲಿಸಿಯೇ ಇಲ್ಲ. ಮಾನ್ಯ ಸದಸ್ಯರು ತಪ್ಪು ಅಭಿಪ್ರಾಯವನ್ನು ಕೊಡಬಾರದು. ಈಗಾಗೇಲ ಕಲಾವಿದರಿಗೆ ಗೌರವ ಧನ ಎಂದು ಕೊಡುವುದಕ್ಕೆ ಬದಲಾಗಿ ಮಾಸಾಶನ ಎಂದು ಮೊದಲು 150 ರೂಪಾಯಿ ಏನು ಕೊಡುತ್ತಿದ್ದೆವು ಅದನ್ನು ಈಗ 250 ರೂಪಾಯಿಗೆ ಏರಿಸಿ ಕೊಡುತ್ತಿದ್ದೇವೆ. ಇನ್ನು ಮುಂದೆ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಕೊಡಬೇಕೆಂದು ತೀರ್ಮಾನ ತೆಗೆದುಕೊಳ್ಳಬೇಕೆಂದಿದ್ದೇವೆ.

ಚಿಕ್ಕ ಬಳ್ಳಾಪುರಕ್ಕೆ ಕೋರ್ಟ್ ಕಾಂಪ್ಲೆಕ್ಸ್‌ನ ಮಂಜೂರಾತಿ.

2572 - ಶ್ರೀ ಎಂ. ಶಿವಾನಂದ (ಚಿಕ್ಕ ಬಳ್ಳಾಪುರ) : ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರದಲ್ಲಿ ಕೋರ್ಟು ಕಾಂಪ್ಲೆಕ್ಸ್ ಮಂಜೂರು ಆಗಿರುವುದು ನಿಜವೇ.

ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಂ.ಸಿ. ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಎಂ. ಶಿವಾನಂದ್ : ಮಾನ್ಯ ಅಧ್ಯಕ್ಷರೆ, ನಮ್ಮ ಚಿಕ್ಕಬಳ್ಳಾಪುರ ತಾಲೂಕಿಗೆ ಕೋರ್ಟ್ ಕಾಂಪ್ಲೆಕ್ಸ್‌ನ್ನು ಮಂಜೂರು ಮಾಡಿದ್ದೇವೆಂದು ಹಿಂದಿನ ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಿದ್ದರು. ಆಗ ಸಂಬಂಧಪಟ್ಟ ಅಧಿಕಾರಿಗಳನ್ನು ವಿಚಾರಿಸಿದಾಗ ಇದು ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್‌ಗೆ ವಿಷಯ ಹೋಗಿದೆ ಎಂದು ಹೇಳಿದ್ದರು. ಈಗ ಸರ್ಕಾರದ ವತಿಯಿಂದ ಕೊಟ್ಟಿರುವ ಉತ್ತರವನ್ನು ನೋಡಿದರೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ಆದ್ದರಿಂದ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುವುದೇನೆಂದರೆ, ಸಾಧ್ಯವಾದಷ್ಟು ಬೇಗನೆ ಕೆಲಸವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೋರ್ಟ್ ಕಾಂಪ್ಲೆಕ್ಸ್ ಮಂಜೂರಾಗಿದೆಯೇ ಎಂದು ಕೇಳಿರುವ ಪ್ರಶ್ನೆಗೆ ಇಲ್ಲ ಎಂದು ಹೇಳಿದ್ದಾರೆ ಚಿಕ್ಕಬಳ್ಳಾಪುರದಲ್ಲಿ ಒಂದು ಕೋರ್ಟ್ ಕಾಂಪ್ಲೆಕ್ಸ್‌ನ್ನು ನಿರ್ಮಾಣ ಮಾಡುವುದಕ್ಕೆ ಸುಮಾರು ಒಂದು ಕೋಟಿ ರೂಪಾಯಿಗಳ ಪ್ಲಾನ್‌ಮತ್ತು ಎಸ್ಟಿಮೇಟನ್ನು ತಯಾರಿಸಿ ಹೈ ಕೋರ್ಟಿಗೆ ಕಳುಹಿಸಿದ್ದಾರೆ. ಇದು ಉಚ್ಚ ನ್ಯಾಯಾಲಯದಿಂದ ನಮ್ಮ ಇಲಾಖೆಗೆ ಬರಬೇಕಾಗುತ್ತದೆ. ಅಲ್ಲಿಂದ ಆರ್ಥಿಕ ಇಲಾಖೆಗೆ ಹೋಗಬೇಕಾಗುತ್ತದೆ. ಅಲ್ಲಿ ಅದಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ಕೊಡಬೇಕಾಗುತ್ತದೆ. ಅದು ಹೈಕೋರ್ಟ್‌ನಿಂದ ಬಂದ ಮೇಲೆ ಇದರ ಬಗ್ಗೆ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಅದನ್ನು ಮಾಡಿಸುತ್ತಾರೆ ಬಿಡಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 12ನೇ ಆಗಸ್ಟ್ 1996ರಂದು ಲಿಖಿತ ಮೂಲಕ ಉತ್ತರಿಸಬೇಕಾದ 26ನೇ ಪಟ್ಟಿಯ 84 ಪ್ರಶ್ನೆಗಳ ಪೈಕಿ 65 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಔಷಧಿಗಳ ವಿತರಣೆಯ ವೆಚ್ಚ

2111 - ಶ್ರೀ ಅಶೋಕ. ಎಸ್.ಕಾಟವೆ (ಹುಬ್ಬಳ್ಳಿ ನಗರ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) 1994-95 ಹಾಗೂ 1995-96ನೇ ಸಾಲಿನಲ್ಲಿ ಹುಬ್ಬಳ್ಳಿಯ ಎಲ್ಲಾ ಕಾ.ರಾ.ವಿ. ಆಸ್ಪತ್ರೆಗಳಲ್ಲಿ ವೈದ್ಯರು ರೋಗಿಗಳಿಗೆ ವಿತರಿಸಲಾದ ಔಷಧಿಗಳ ವೆಚ್ಚವೆಷ್ಟು?

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕ ಸಚಿವರು) :

ಅ) 1994-95ನೇ ಸಾಲಿನಲ್ಲಿ ರೂ. 18,50,287-00 (ರೂ. ಹದಿನೆಂಟು ಲಕ್ಷದ ಐವತ್ತು ಸಾವಿರದ ಎರಡು ನೂರ ಎಂಭತ್ತೇಳು) ಹಾಗೂ

1995-96ನೇ ಸಾಲಿನಲ್ಲಿ ರೂ. 16.42,795-00 (ರೂ. ಹದಿನಾರು ಲಕ್ಷದ ನಲವತ್ತೆರಡು ಸಾವಿರದ ಏಳುನೂರ ತೊಂಭತ್ತೈದು, ಮೌಲ್ಯದ ಔಷಧಿಯನ್ನು ವಿತರಿಸಲಾಗಿರುತ್ತದೆ.

ಪರಿಶಿಷ್ಟ ಜಾತಿ ಜನರಿಗೆ ಒದಗಿಸಲಾದ ಟಿ.ವಿ. ಸೆಟ್ಟುಗಳು.

2405 - ಶ್ರೀ ಬಸನಗೌಡ ರಾ. ಪಾಟೀಲ್ (ವಿಜಾಪುರ) : ಮಾನ್ಯ ವಾರ್ತಾ ಮತ್ತು ಪ್ರಚಾರ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?